ಸಾರ ಸಂಗ್ರಹವನ್ನು ಮಂಡಿಸಿದ್ದಾರೆ.

ಅವರ ಸಂಪುಟಗಳಲ್ಲಿ ಕ್ರಮವಾಗಿ ಪೀಠಿಕೆ, ಭಾರತೀಯ ತತ್ತ್ವಶಾಸ್ತ್ರದ ವಿವಿಧ ಮಜಲುಗಳ ವಿವರ, ಬೌದ್ಧ ಮತ್ತು ಜೈನ ತತ್ತ್ವಶಾಸ್ತ್ರ ಮತ್ತು ಹಿಂದೂ ಚಿಂತನೆಯ ಆರು ವ್ಯವಸ್ಥೆಗಳಾದ ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸೆ ಮತ್ತು ವೇದಾಂತದ ಉಲ್ಲೇಖವಿದೆ. ಶಂಕರತತ್ತ್ವದ ಅಧ್ಯಯನ, ಯೋಗವಾಸಿಷ್ಠ, ಭಗವದ್ಗೀತೆ, ಔಷಧೀಯ ಶಾಖೆಗಳ ವಿಕಾಸದ ವಿವರ, ಪಾಂಚರಾತ್ರ, ಭಾಸ್ಕರ, ಯಮುನ, ರಾಮಾನುಜ, ನಿಂಬಾರ್ಕ, ವಿಜ್ಞಾನ ಭಿಕ್ಷು..ಮುಂತಾದ ವಿಚಾರಗಳನ್ನು ವಿವರಿಸುತ್ತ ದ್ವಂದ್ವವಾದ, ಬಹುತ್ವವಾದದ ವಿವರ ನೀಡಿದ್ದಾರೆ. ದಕ್ಷಿಣದ ಶೈವ ಪರಂಪರೆಯ ವಿವರಗಳಲ್ಲಿ ಶೈವಸಿದ್ಧಾಂತ, ವೀರಶೈವ, ಪುರಾಣಗಳಲ್ಲಿ ಮತ್ತು ಕೆಲವು ಮಹತ್ವದ ಗ್ರಂಥಗಳಲ್ಲಿ ಶೈವ ತತ್ತ್ವಶಾಸ್ತ್ರದ ಪ್ರತಿಪಾದನೆಯ ಉಲ್ಲೇಖಗಳ ವಿವರವಿದೆ. ಎಲ್ಲಿಯೂ ಪಂಥೀಕರಣಕ್ಕೆ ಒಳಗಾಗದೇ, ಹೊಸತಲೆಮಾರಿಗೆ ಭಾರತೀಯ ಪರಂಪರೆಯ ಮಾಹಿತಿಯನ್ನು ದಾಟಿಸುವ ದೃಷ್ಟಿಯಿಂದ ಮೂಲವನ್ನು ಉಲ್ಲೇಖಿಸಿ ಮಾಹಿತಿ ಸಂಗ್ರಹ ಮಾಡಲಾಗಿದೆ. ಪ್ರಾಥಮಿಕ ಆಕರವನ್ನೇ ಬಳಸಿ ಬರೆದ ಕೃತಿಯಿದು. ಪಾಶ್ಚಾತ್ಯ ತತ್ತ್ವಶಾಸ್ತ್ರದ ಅಧ್ಯಯನ ಹಿನ್ನೆಲೆ ಅವರಿಗಿದ್ದರೂ ಅವರು ಸ್ವತಂತ್ರವಾದ ದೇಸೀ ದೃಷ್ಟಿಕೋನದಿಂದಲೇ ವಿಚಾರ ಮಂಡನೆ ಮಾಡಿದ್ದಾರೆ.

ತತ್ತ್ವಶಾಸ್ತ್ರದ ಇತಿಹಾಸದಲ್ಲಿ ಇದೊಂದು ಮಹತ್ವದ ಗ್ರಂಥಸಂಪುಟವಾಗಿದ್ದು, ಅದು ಕನ್ನಡದ ಓದುಗರಿಗೆ ಲಭ್ಯವಾಗುವಂತೆ ಮಾಡಿದ ತಂಡದಲ್ಲಿ ನಾನಿದ್ದೇನೆ ಎನ್ನುವುದು ನನಗೆ ಬಹಳ ಖುಷಿ. ಬಹಳ ಹಿಂದೆ ನಾನು ಪ್ರೊ.ಎಂ.ಎ. ಹೆಗಡೆ ಅವರ ಜೊತೆಗೂಡಿ, 'ಭಾರತೀಯ ದರ್ಶನ ಶಾಸ್ತ್ರ-ಪ್ರವೇಶ' ಎಂಬ ಪುಸ್ತಕವನ್ನು ಬರೆದಿದ್ದೆ. ಬಲದೇವ ಉಪಾಧ್ಯಾಯ, ದೇವಿ ಪ್ರಸಾದ್ ಚಟ್ಟೋಪಾಧ್ಯಾಯ ಅವರ ಕೃತಿಗಳ ಓದು ನನಗೆ ನೆರವಾಗಿದೆ. ಪ್ರಸ್ತುತ ಅನುವಾದ ಪ್ರಕ್ರಿಯೆಯು ನನ್ನ ಓದಿನ ಹರವನ್ನು ಇನ್ನಷ್ಟು ವಿಸ್ತಾರಗೊಳಿಸಿತು. ಆಯಾ ವಯೋಮಾನದ ಓದು ಬರಹಗಳು ಕೊಡುವ ಅನುಭವಗಳು, ಆನಂದ, ಆತಂಕಗಳ ವ್ಯಾಪ್ತಿ ವಿಭಿನ್ನವಾದುದು. ಆದ್ದರಿಂದ ಈ ಸಂಪುಟಗಳ ಓದು ನನ್ನ ಜೀವನದಲ್ಲಿ ಮರೆಯಲಾರದ ನೆನಪೊಂದನ್ನು ಉಳಿಸಿದೆ.

◆ **ಇತ್ತೀಚೆಗಿನ ವರ್ಷಗಳ ತತ್ತ್ವಶಾಸ್ತ್ರದ ಅಧ್ಯಯನ ಅವಕಾಶಗಳು ಕೊಂಚ ಕಡಿಮೆ. ಅಂದರೆ ಜನರಿಗೆ ತತ್ತ್ವಶಾಸ್ತ್ರದ ಕಡೆಗಿರುವ ಆಸಕ್ತಿ ಕಡಿಮೆಯಾಗುತ್ತಿದೆ ಎಂದು ನಿಮಗೆ ಅನಿಸುತ್ತದೆಯೇ ?**

ಆಧುನಿಕ ಕಾಲವು ಸರಿಯಿಲ್ಲ ಎಂದು ಹೀಗಳೆಯುವ ಪೈಕಿ ನಾನಲ್ಲ. ಕಲಾಪ್ರಕಾರಗಳಾಗಲೀ, ತತ್ತ್ವಶಾಸ್ತ್ರದ ವಿವಿಧ ರೂಪಗಳಾಗಲೀ ವೇದಕಾಲದಿಂದ ಇಂದಿನವರೆಗೂ ಅನೇಕ ಶತಮಾನಗಳನ್ನು ದಾಟಿ ಬಂದಿವೆ. ಜೀವನ ಇರುವವರೆಗೆ ಜೀವನಾನುಭವ ಇರಲೇಬೇಕಲ್ಲ. ಹೊಸತಲೆಮಾರಿನ ಯುವಜನತೆ ತತ್ತ್ವಶಾಸ್ತ್ರದ ಕುರಿತು ಆಸಕ್ತಿ ತಳೆದಿದ್ದಾರೆ. ಡಿಜಿಟಲ್ ಕ್ಷೇತ್ರದಲ್ಲಿ ಗಮನಿಸಿದರೆ, ಅನೇಕ ರೀತಿಯ ಹೊಳಹುಗಳು ಲಭ್ಯವಾಗುತ್ತ ಇವೆ. ಆದರೆ ತತ್ತ್ವವು ಕಾಲ ಬದಲಾದಂತೆ ಬೇರೆ ಬೇರೆ ರೂಪ ತಾಳಬಹುದಷ್ಟೇ. ನಾನು ಖಂಡಿತಾ ನಿರಾಶಾವಾದಿಯಲ್ಲ.

ಆಧುನಿಕ ಕಾಲದಲ್ಲಿ ತತ್ತ್ವಶಾಸ್ತ್ರವು ಸತತ ಉನ್ಮುಖವಾದುದು. 'ದ್ಯಾವಾ ಪೃಥಿವೀ' ವ್ಯಾಪ್ತಿಯುಳ್ಳದ್ದು. ನನ್ನ ಗ್ರಹಿಕೆಯನ್ನು ಆಧರಿಸಿ ಹೇಳುವುದಾದರೆ ಯಾಜ್ಞವಲ್ಕ್ಯ, ಕಪಿಲ, ಕೃಷ್ಣ, ಬುದ್ಧರಿಂದ ಹಿಡಿದು, ಶಂಕರ, ಅಲ್ಲಮ, ನಾನಕ ಸೂಫಿಗಳಿಗೆ ಮುಂದುವರೆದು, ರಾಜಾರಾಮ ಮೋಹನ್ ರಾಯ್, ಆನಿಬೆಸೆಂಟ್, ಮಹಾತ್ಮಾ ಗಾಂಧಿ, ಇಂದಿನ ಜನಪ್ರಿಯ ಗುರುಗಳ ಉಪದೇಶಗಳ ತನಕ ಅದು ಅಸಾಧಾರಣವಾಗಿ ಹರಡಿಕೊಂಡಿದೆ. ಸರಿ ತಪ್ಪುಗಳ ಹಂಗು ಇಲ್ಲಿಲ್ಲ. 'ಏಕಂ ಸತ್..' ಎಂಬಂತೆ ಅಥವಾ ಗಾಂಧಿ ಹೇಳಿದ- ಈಶ್ವರ ಅಲ್ಲಾ ತೇರೇನಾಮ್ ಎಂದಂತೆ ಇದು ಎಲ್ಲವನ್ನೂ ಒಳಗೊಂಡು ನಿರಂತರ ಬೆಳೆಯುತ್ತಿರುವ ಶಾಖೆ. ವೇದಾಂತವಾಗಲೀ, ತತ್ತ್ವಶಾಸ್ತ್ರವಾಗಲಿ ಜಿಗುಟಿನ ವಿಷಯವಲ್ಲ. ಅದು ಜನರ ಮಧ್ಯೆ ಬೆಳೆಯುತ್ತಲೇ ಇರುವಂತಹ ಜಿಜ್ಞಾಸೆ. ನನ್ನ ಪಾಲಿಗೆ, ಜನರ ಭಾಗವಹಿಸುವಿಕೆಯಿರುವ ಯಕ್ಷಗಾನ, ಹರಿಕಥೆ ಮುಂತಾದ ಪ್ರಕಾರಗಳು ಮತ್ತು ಆ ಪ್ರಕಾರದಲ್ಲಿ ಸಾಧನೆ ಮಾಡಿದ ಅನೇಕರು, ಹೊಸ ಹೊಸ ಹೊಳಹುಗಳನ್ನು ಕೊಟ್ಟಿದ್ದಾರೆ.

●